| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀಮತಿ ಹನುಮಂತಪ್ಪ ತಂದೆ ದಿ॥ ಚಂದ್ರಶೇಖರ<br>ಶ್ರೀಮತಿ ಗಾದಿಲಿಂಗಪ್ಪ ತಂದೆ ದಿ॥ ಚಂದ್ರಶೇಖರ | ಕಂದಾಯ ಪರಿವೀಕ್ಷಕರು, ಕೋಳೂರು |

**ವಿಷಯ:**-ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಹಿರೇಡ್ಲಿಗಿ ಗ್ರಾಮದ ಸರ್ವೆ ನಂ:35/ಎ ವಿಸ್ತೀರ್ಣ:1.90 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

********

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಹಿರೇಡ್ಲಿಗಿ ಗ್ರಾಮದ ಸರ್ವೆ ನಂ:35/ಎ ವಿಸ್ತೀರ್ಣ:1.90 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀಮತಿ ಮಣಿಗಿ ಈರಮ್ಮ ಗಂಡ ಚಂದ್ರಶೇಖರ್ ಇವರು ಶ್ರೀಮತಿ ಹನುಮಂತಪ್ಪ ತಂದೆ ದಿ॥ ಚಂದ್ರಶೇಖರ ಶ್ರೀಮತಿ ಗಾದಿಲಿಂಗಪ್ಪ ತಂದೆ ದಿ॥ ಚಂದ್ರಶೇಖರ ಇವರಿಗೆ ಪಾಲು ವಿಭಾಗ ಮಾಡಿ ಕೊಟ್ಟಿರುತ್ತಾರೆ. ಅದರಂತೆ ಪಾಲುದಾರರು ಹಕ್ಕು ಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ಪರಿವೀಕ್ಷಕರು, ಕೋಳೂರು ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿ ಮಾಡಲಾಗಿ ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲ ಆದರೆ ಪಾಲು ವಿಭಾಗ ಪತ್ರಕ್ಕೆ ಹಾಲಿ ಭೂಮಾಲಿಕರು ಸಹಿ ಮಾಡಿರುವುದಿಲ್ಲ ಕಾರಣ ಕಂದಾಯ ಪರಿವೀಕ್ಷಕರು ಕೋಳೂರು ಇವರು ಸದ್ರಿ ಪಾಲು ವಿಭಾಗ ಪತ್ರವನ್ನು ತಿರಸ್ಕರಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:23-05-2016, 20-06-2016, ಮತ್ತು 11-07-2016 ರಂದು ವಿಚಾರಣೆ ನಡೆಸಲಾಗಿ ಅರ್ಜಿದಾರರು ಪ್ರಕರಣಕ್ಕೆ ಹಾಜರಾಗಿ ಪಾಲು ವಿಭಾಗ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ಪತ್ರ ನೀಡಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶಿಸಲಾಗಿದೆ.

-::ಆದೇಶ::-

**ಸಂ/ಕಂ/ವಿವಾದ/03/2016-17** **ದಿನಾಂಕ: 19/08/2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಹಿರೇಡ್ಲಿಗಿ ಗ್ರಾಮದ ಜಮೀನನ್ನು ಈ ಕೆಳಗಿನಂತೆ ಆದೇಶಿಸಲಾಗಿದೆ.

| "ಎ" ಷೆಡ್ಯೂಲ್ ಶ್ರೀ ಗಾದಿಲಿಂಗಪ್ಪ ತಂದೆ ದಿ॥ ಚಂದ್ರಶೇಖರ | |
|---|---|
| ಸರ್ವೆ ನಂ | ವಿಸ್ತೀರ್ಣ |
| 35/ಎ ಪೈಕಿ | 0.95 |

| "ಬಿ" ಷೆಡ್ಯೂಲ್ ಶ್ರೀ ಹನುಮಂತಪ್ಪ ತಂದೆ ದಿ॥ ಚಂದ್ರಶೇಖರ | |
|---|---|
| ಸರ್ವೆ ನಂ | ವಿಸ್ತೀರ್ಣ |
| 35/ಎ ಪೈಕಿ | 0.95 |

| “ಸಿ” ಷೆಡ್ಯೂಲ್ ಶ್ರೀ ಮಣಿಗೆ ಈರಮ್ಮ ಗಂಡ ದಿ॥ ಚಂದ್ರಶೇಖರ | |
|---|---|
| ಸರ್ವೆ ನಂ | ವಿಸ್ತೀರ್ಣ |
| 35/ಎ ಪೈಕಿ | 0.82 |

ಈ ಆದೇಶವು ಇಂದು ದಿನಾಂಕ:19-8-16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ.

<u>ಪ್ರತಿಯನ್ನು:</u>
1.ವಾದಿಗಳು
2.ಶಿರಸ್ತೇದಾರರು ಭೂಮಿ
3.ಆದೇಶದ ಕಡತಕ್ಕೆ